# 1

# ಯೇಸುವಿನ – ದೈವತ್ವ ಹಾಗೂ ಮನುಷ್ಯತ್ವ

## (1; 2; 4:14-16)

ಹೊಸ ಒಡಂಬಡಿಕೆಯ ಇತರೆ ಪುಸ್ತಕಗಳಂತೆ, ಇಬ್ರಿಯ ಪುಸ್ತಕವನ್ನು ಸಹ, ಯೇಸುವಿನ ಕುರಿತಾಗಿಯೇ ಬರೆಯಲ್ಪಟ್ಟಿದೆ. ಈ ಪುಸ್ತಕದಲ್ಲಿ ಆತನನ್ನು "ನಾವು ಅರಿಕೆ ಮಾಡಬೇಕಾದ ಅಪೊಸ್ತಲ ಹಾಗೂ ಮಹಾಯಾಜಕನೆಂದು" ಬಿಂಬಿಸಲಾಗಿದೆ (3:1). "ನಂಬಿಕೆಯನ್ನು ಹುಟ್ಟಿಸುವವನೂ, ಪೂರೈಸುವವನೂ" ಎಂದು ತಿಳಿಸಲಾಗಿದೆ (12:2). "ಸಭೆಯೆಂಬ ಹಿಂಡಿಗೆ ಮಹಾಪಾಲಕನಾಗಿರುವ ನಮ್ಮ ಕರ್ತನಾದ ಯೇಸು" ಎಂದು (13:20) ಕರೆಯಲಾಗಿದೆ. ಮನುಷ್ಯರ ಪಾಪನಿವಾರಣೆ ಮಾಡುವ ಯಜ್ಞ ಎಂದು ಹೇಳಲಾಗಿದೆ (9:26). ಯೇಸು ಕ್ರಿಸ್ತನು ನಿನ್ನೆ ಇದ್ದ ಹಾಗೆ ಈ ಹೊತ್ತು ಇದ್ದಾನೆ ನಿರಂತರವೂ ಹಾಗೆಯೇ ಇರುವನು (13:8).

ಯೇಸು ಕ್ರಿಸ್ತನ ಕುರಿತ ಎರಡು ಪ್ರಮುಖವಾದ ಅಂಶಗಳನ್ನು ಇಬ್ರಿಯ ಮೊದಲ ಎರಡು ಅಧ್ಯಾಯಗಳಲ್ಲಿ ತಿಳಿಸಲಾಗಿದೆ: ಆತನು ದೇವರು ಹಾಗೂ ಮನುಷ್ಯನೂ[1] ಆಗಿರುವನು ಎಂಬದೇ. ಯೇಸುಕ್ರಿಸ್ತನ ದೈವತ್ವ ಹಾಗೂ ಮನುಷ್ಯತ್ವ ಹಾಗೂ ಅವುಗಳ ಪರಿಣಾಮದ ಕುರಿತು ಅಧ್ಯಯನ ಮಾಡೋಣ.

### ಯೇಸು ದೈವತ್ವವನ್ನು ಹೊಂದಿರುವನು

ಅಧ್ಯಾಯ 1ರಲ್ಲಿ, ಯೇಸುವಿನ ದೈವತ್ವವನ್ನು ಗಮನಿಸುತ್ತೇವೆ. ಇಲ್ಲಿ ಯೇಸು ಕ್ರಿಸ್ತನ ಬಗ್ಗೆ ಈ ಅಧ್ಯಾಯವು ನಮಗೆ ಏನನ್ನು ಬೋಧಿಸುತ್ತದೆ?

*ದೇವರು ಮಗನ ಮುಖಾಂತರ ಮಾತಾಡಿದ್ದಾನೆ* (1:1, 2ಎ). ಆತನು ದೇವರ ಶ್ರೇಷ್ಠ ವ್ಯಕ್ತಿಯಾಗಿ ಮಾತಾಡಿರುವನು. ಪಿತೃಗಳ ಸಂಗಡ ಮಾತಾಡಿದ ದೇವರು, ನಮ್ಮೊಂದಿಗೆ ಮಾತಾಡಿದ್ದಾನೆ. ಪ್ರವಾದಿಯ ಮಾತುಗಳಿಗಿಂತಲೂ, ಮಗನಿಂದ ವಾಕ್ಯ ವನ್ನು ಸ್ವೀಕರಿಸುವದು ಬಹಳ ಅತ್ಯುತ್ತಮವೇ.

ಯೇಸುವಿನ ಮುಖಾಂತರ ಜಗತ್ತನ್ನು ಉಂಟುಮಾಡಿ, ಅದನ್ನು ಕಾಪಾಡುತ್ತಾನೆ (1:2ಬಿ, 3ಬಿ). ದೇವರು ತನ್ನ ಸೃಷ್ಟಿ ಕಾರ್ಯವನ್ನು ತನ್ನ ಮಗನ ಮುಖಾಂತರ ಸಾದರ ಪಡಿಸಿದ್ದಾನೆ (ಯೋಹಾನ 1:1-14). ದೇವರ ಸೃಷ್ಟಿಯಲ್ಲಿಯೇ ದೇವರು ತನ್ನ ಕಾರ್ಯಗಳನ್ನು ಅಂತ್ಯಗೊಳಿಸಲಿಲ್ಲ. ದೇವರು ಅದನ್ನು ತನ್ನ ಮಗನ ಮೂಲಕ ಲೋಕವನ್ನು ಒಟ್ಟುಗೂಡಿಸಿಕೊಂಡಿದ್ದಾನೆ.

*ಯೇಸು ಸಂಪೂರ್ಣ ದೇವರಂತೆಯೇ ಇದ್ದಾನೆ;* ಆತನಲ್ಲಿ ದೈವೀಕ ಗುಣಲಕ್ಷಣಗಳಿವೆ. "ಈತನು ದೇವರ ಪ್ರಭಾವದ ಪ್ರಕಾಶವೂ ಆತನ ತತ್ವದ ಮೂರ್ತಿಯೂ ಆಗಿರುವನು" (1:3ಎ). ಆತನು ದೇವರ ಸ್ವಭಾವವನ್ನೇ ಹೊಂದಿರುವನು (ಫಿಲಿಪ್ಪಿ 2:5-9).

*"ಯೇಸು ಪಾಪ ಶುದ್ಧಿ ಮಾಡಿದ್ದಾನೆ" ಆತನು ದೇವರ ಬಲಗಡೆಯಲ್ಲಿ ಆಸನಾರೂಢನಾಗಿದ್ದಾನೆ* (1:3ಸಿ). ಪವಿತ್ರವಾಗಿರುವವನು ಮಾತ್ರ ಪಾಪಶುದ್ಧಿಮಾಡಿ, ದೇವರ ಬಲಗಡೆಯಲ್ಲಿ ಕೂತುಕೊಳ್ಳಲು ಅರ್ಹನಾಗಿದ್ದಾನೆ.

*ಯೇಸು ದೈವೀಕ ವ್ಯಕ್ತಿಯಾಗಿರುವದರಿಂದ ದೇವದೂತರಿಗಿಂತಲೂ ಶ್ರೇಷ್ಠ ನಾಗಿದ್ದಾನೆ* (1:4-14). ಅಧ್ಯಾಯದ ಉಳಿದ ಭಾಗದಲ್ಲೂ, ಯೇಸು ದೂತರಿಗಿಂತಲೂ ಶ್ರೇಷ್ಟನು ಎಂದು ನೋಡುತ್ತೇವೆ. ಆತನು ಏಕೆ ಶ್ರೇಷ್ಟನು? ಯಾಕೆಂದರೆ ದೇವರು ಆತನನ್ನು ಮಗನೆಂದು

ಕರೆದಿದ್ದಾನೆ ವಿನಃ ದೇವದೂತರನ್ನು ಆ ರೀತಿಯಾಗಿ ಕರೆಯಲಿಲ್ಲ (1:5, 6). ನಂತರ ಆತನನ್ನು ದೂತರಿಗಿಂತ ವಿಭಿನ್ನವಾಗಿ ಚಿತ್ರಿಸಲಾಗಿದೆ. (ಎ) ಆತನು ಆರಾಧನೆಗೆ ಅರ್ಹನಾಗಿರುವದರಿಂದ, ದೂತರು ಆತನನ್ನು ಆರಾಧಿಸುತ್ತಾರೆ (1:6). (ಬಿ) ದೂತರು ಊಳಿಗದ ಆತ್ಮಗಳಾಗಿರುವಾಗ, ಯೇಸು ರಾಜ್ಯವನ್ನಾಳುತ್ತಾನೆ (1:7-9). (ಸಿ) ಯೇಸು ಜಗತ್ತನ್ನು ನಿರ್ಮಿಸಿದ್ದಾನೆ, ಅದು ಒಂದು ದಿನ ನಿರ್ನಾಮವಾಗುತ್ತದೆ. ಆದರೆ, ಯೇಸು ದೇವರ ಬಲಗಡೆಯಲ್ಲಿ ಆಳುತ್ತಾನೆ (1:10-13); ದೂತರುಗಳು "ಊಳಿಗದ ಆತ್ಮಗಳು" (1:14). ರಕ್ಷಣೆಯನ್ನು ಹೊಂದುವವರ (ಕ್ರೈಸ್ತರ) ಪರ ವಾಗಿ ಅವರು ಕಾರ್ಯನಿರ್ವಹಿಸುತ್ತಾರೆ.

ಈ ಸಂಗತಿಗಳ ಅರ್ಥವಾದರೂ ಏನು? ಒಬ್ಬನು ರಕ್ಷಣೆ ಹೊಂದಬೇಕಾದರೆ ಯೇಸುವನ್ನು ದೇವರ ಮಗನೆಂದು ಮತ್ತು ಆತನ ದೈವತ್ವವನ್ನು ನಂಬಬೇಕು (ನೋಡಿರಿ ಯೋಹಾನ 8:24)! ಇಬ್ರಿಯ 2:1-4ರಲ್ಲಿ, ಯೇಸುವಿನ ಪುತ್ರತ್ವದ ದೈವತ್ವದ ಪರಿಣಾಮಗಳ ಕುರಿತು ಮಾತಾಡಿರುವನು, ಮತ್ತು ಈಗಲೂ ದೇವರು ತನ್ನ ಮಗನ ಮುಖಾಂತರ ಮಾತಾಡುವನು ಎಂದಿರುವನು.

## ಯೇಸುವಿನ ದೈವತ್ವ ಏಕೆ ಪ್ರಮುಖವಾಗಿದೆ?

ಯೇಸುವಿನ ದಿವ್ಯವಾದ ದೈವೀಕ ಅಸ್ತಿತ್ವದ ಬಗ್ಗೆ ಈ ವಚನದಲ್ಲಿ ತಿಳಿಸಲಾಗಿದೆ: ಆದದರಿಂದ ನಾವು ಕೇಳಿದ ಸಂಗತಿಗಳಿಗೆ, "ತಪ್ಪಿ ಹೋದೆವೆಂದು" ಭಯಪಟ್ಟು ಅವುಗಳಿಗೆ ಹೆಚ್ಚಾಗಿ ಲಕ್ಷ್ಯಕೊಡುವವರಾಗಿರಬೇಕು (2:1). ಹಳೆ ಒಡಂಬಡಿಕೆಯ ನಿಯಮಗಳಿಗೆ ಸಂಬಂಧಿಸಿದ ವಿಚಾರವನ್ನು ಇಲ್ಲಿ ಚರ್ಚಿಸಲಾಗಿದೆ. "ದೂತರ ಮೂಲಕ ಉಂಟಾದ ಮಾತುಗಳನ್ನು (ಮೋಶೆಯ ಕಟ್ಟಳೆ) ತಿದ್ದು ಪಡಿ ಮಾಡಿದರೆ ಆ ಅವಿಧೆಯತೆ ಮತ್ತು ಅಪರಾಧಕ್ಕೆ ತಕ್ಕ ಶಿಕ್ಷೆಯನ್ನು ಅನುಭವಿಸಲೇಬೇಕು" (ಅವನ ಓದುಗರು ಇದನ್ನು ಒಪ್ಪಿದ್ದರು). ಆದ್ದರಿಂದ ಈ ಅತ್ಯಂತ ವಿಶೇಷ ರಕ್ಷಣೆಯನ್ನು ನಾವು ಅಲಕ್ಷ್ಯ ಮಾಡಿದರೆ ತಪ್ಪಿಸಿಕೊಳ್ಳುವದು ಹೇಗೆ? (2:2, 3). ಈ ವಿಚಾರವನ್ನು ಪ್ರಥಮಸಾರಿ ಓದುವವರು, ಆಶ್ಚರ್ಯ ವ್ಯಕ್ತಪಡಿಸಿದರೂ ತಪ್ಪಿಸಿಕೊಳ್ಳಲು ಅಸಾಧ್ಯ ಎಂದು ತಿಳಿಯುವರು!

ದೇವರು ತನ್ನ ಮಗನ ಮುಖಾಂತರ ಮಾತಾಡಿರುವದರಿಂದ; ಆತನ ಮಾತನ್ನು ಕೇಳ ಬೇಕು ಇಲ್ಲವಾದರೆ, ನಿತ್ಯವಾದ ಪರಿಣಾಮಗಳನ್ನು ಎದುರಿಸಬೇಕು!

ಕೆಲವು ಸಾರಿ, ನಾವುಗಳು ಕೆಲವರ ಮಾತನ್ನು ಕೇಳಬೇಕಾಗುತ್ತದೆ. ಮಕ್ಕಳು ತಂದೆ ತಾಯಿಗಳು ಮಾತನ್ನು ಕೇಳಬೇಕಾಗುತ್ತದೆ, ವಿದ್ಯಾರ್ಥಿಗಳು ಅವರ ಶಿಕ್ಷಕರ ಮಾತನ್ನು ಆಲಿಸಬೇಕಾಗುತ್ತದೆ. ಕೆಲಸಗಾರರು, ಕೆಲಸ ನೀಡಿರುವವರಿಗೆ ವಿಧೇಯರಾಗಬೇಕು, ನಾಗರೀಕರು, ಪೋಲಿಸರ ಮಾತನ್ನು ಕೇಳಬೇಕಾಗುತ್ತದೆ. ನಾವು ಅವುಗಳನ್ನು ನಿರಾ ಕರಿಸಿದರೆ, ನಾವು ತೊಂದರೆಗೊಳಗಾಗುತ್ತೇವೆ! ಹೀಗಿರುವಾಗ, ದೈವೀಕ ವ್ಯಕ್ತಿಯಾದ ಯೇಸು ಕ್ರಿಸ್ತನ ಮಾತನ್ನು ತಿರಸ್ಕರಿಸಿದರೆ, ಇನ್ನೂ ಹೆಚ್ಚಾದ ತೊಂದರೆಗೆ ಒಳಪಡುವದಿಲ್ಲವೇ!

## ಯೇಸು ಸಹ ಮನುಷ್ಯನಾಗಿದ್ದನು

ಯೇಸುವಿನ ದೈವತ್ವದ ಕುರಿತು ತಿಳಿಸಿದ ನಂತರ, ಬರಹಗಾರನು ಆತನ ಮನುಷ್ಯ ಸ್ವಭಾವದ ಕುರಿತು ಬರೆದಿರುವನು. ಇಬ್ರಿಯ 2:5-18ರಲ್ಲಿರುವ ಕ್ರಿಸ್ತನ ಮನುಷ್ಯತ್ವದ ಕುರಿತಾದ ಮಹಾ ಸತ್ಯವನ್ನು ಆಲೋಚಿಸಿರಿ. ಇಲ್ಲಿ ಯೇಸುವಿಗೂ ಹಾಗೂ ದೂತರಿಗೂ ನಡುವೆ ಇರುವ ವಿಭಿನ್ನತೆಯನ್ನು ಮುಂದುವರೆಸಲಾಗಿದೆ ಅಧ್ಯಾಯ 1ರಲ್ಲಿ, ಯೇಸು ದೇವ ಕುಮಾರನಾಗಿರುವದರಿಂದ ದೂತರಿಗಿಂತ ಶ್ರೇಷ್ಟನು ಎಂಬದಾಗಿದ್ದರೆ, ಅಧ್ಯಾಯ 2ರಲ್ಲಿ, ಯೇಸು ಮನುಷ್ಯನಾಗಿ ಬಂದದ್ದರಿಂದ ದೂತರಿಗಿಂತ ಶ್ರೇಷ್ಟನು ಎಂಬುದಾಗಿದೆ. ಇಲ್ಲಿ ತಿಳಿಸಿರುವ ವಾಕ್ಯದಲ್ಲಿ (ಕೀರ್ತನೆ 8:4-6) ಲೋಕದ ಅಧಿಕಾರವನ್ನು ದೇವರು ದೂತರಿಗೆ

ನೀಡಿರುವದಿಲ್ಲ ಎಂಬದು ಸ್ಪಷ್ಟವಾಗಿದೆ. ಆದರೆ ಮನುಷ್ಯನಿಗೆ ದೇವರು ಆ ವಾಗ್ದಾನಗಳನ್ನು ಮಾಡಿರುವನು. ಅಧಿನತೆಯ ವಾಗ್ದಾನವು ಲೋಕದಲ್ಲಿ ನೆರವೇರದೆ ಇದ್ದರೂ (2:8ಬಿ), "ಯೇಸುವಿನಲ್ಲಿ ಅದು ನೆರವೇರಿರುತ್ತದೆ! ಆತನು ದೇವದೂತರಿಗಿಂತಲೂ ಸ್ವಲ್ಪ ಕಡಿಮೆಯಾಗಿ ಮಾಡಲ್ಪಟ್ಟನು" (2:9). ಯೇಸುವು ಪ್ರಭಾವವನ್ನು ಮಾನವನು ಕಿರೀಟವಾಗಿ ಹೊಂದಿದ್ದಾನೆ. ಕೀರ್ತನೆಯಲ್ಲಿನ ಪ್ರವಾದನೆಯು ಯೇಸುವಿನಲ್ಲಿ ಈಡೇರಿತು.

ಪ್ರಭಾವ ಹೊಂದಿದ ಈ ಯೇಸು ಯಾರಾಗಿದ್ದಾನೆ? ಆತನು ಮನುಷ್ಯನಾಗಿ ಜೀವಿಸಿದನು: (ಎ) ಆತನು ಮರಣ ಬಾಧೆಯನ್ನು ಅನುಭವಿಸಿದನು (2:9, 14); ದೈಹೀಕ ದೇಹ ಹೊಂದಿದವನು ಮಾತ್ರ ಮರಣವನ್ನು ಅನುಭವಿಸಬಹುದು. (ಬಿ) ಆತನ ಮತ್ತು ಆತನಿಂದ ರಕ್ಷಿಸಲ್ಪಟ್ಟವರ ಮೂಲವು ಒಂದೇಯಾಗಿರುತ್ತದೆ (2:10, 11). (ಸಿ) ಮಾನವರನ್ನು ಆತನು ಸಹೋದರರರೆಂದು ಕರೆದಿರುವನು (2:11ಬಿ-13). (ಡಿ) ಆತನು ಮಾನವರಂತೆ "ರಕ್ತ ಮಾಂಸದಾರಿಯಾದನು" (2:14). (ಇ) ದೇವದೂತರಿಗಿಂತಲೂ, ಆತನು ಶರೀರಾಧೀನರಾದ ತನ್ನ ಸಹೋದರರಿಗೆ ಸಾಹಾಯಿಸುತ್ತಾನೆ (2:16). (ಎಫ್) ತನ್ನ ಸಹೋದರರಿಗೆ ಸರಿಸಮಾನನಾದನು (2:17). ಆದ್ದರಿಂದ ಆತನು ದೈವತ್ವವನ್ನು ಹೊಂದಿದ್ದರೂ, ಆತನು ಸಕಲ ವಿಷಯದಲ್ಲೂ ಮನುಷ್ಯರಂತೆ ಇದ್ದನು![2] ಆದ್ದರಿಂದ ಆತನ ದೈವತ್ವ ಹಾಗೂ ಮನುಷ್ಯತ್ವ ಇವೆರಡನ್ನು ಸತ್ಯವಂತರಾದ ಕ್ರೈಸ್ತರು ಒಪ್ಪಿಕೊಳ್ಳತಕ್ಕದ್ದು!

ಆತನು ಮನುಷ್ಯ ಆಕಾರವನ್ನು ಸಹ ಹೊಂದಿದ್ದನು ಎಂದು, ಪ್ರಾಯೋಗಿಕವಾಗಿ ಹೇಗೆ ಅರಿಯಬಹುದು? ಇಬ್ರಿಯ ಬರಹಗಾರನು ಇದಕ್ಕೆ ತಕ್ಕ ಉತ್ತರ ನೀಡಿರುವನು ಇಬ್ರಿಯ 2:17, 18ನ್ನು ಪುನಃ ಓದಿರಿ. ಆತನು ಮನುಷ್ಯನಾಗಿ ಬಂದದ್ದರಿಂದ, ನಮಗಾಗಿ ಮಹಾ ಯಾಜಕನಾದನು: "ತಾನೇ ಶೋಧಿಸಲ್ಪಟ್ಟು ಬಾಧೆಯನ್ನು ಅನುಭವಿಸಿರುವದರಿಂದ ಶೋಧಿಸಲ್ಪಡುವವರಿಗೆ ಸಹಾಯಮಾಡುವದಕ್ಕೆ ಶಕ್ತನಾಗಿದ್ದಾನೆ" (2:18). ಹಾಗೂ ಮುಂದಿನ ಭಾಗದಲ್ಲಿ ಬರಹಗಾರನು ಬರೆದು,

> ಯಾಕಂದರೆ ನಮಗಿರುವ ಮಹಾಯಾಜಕನು ನಮ್ಮ ನಿರ್ಬಲಾವಸ್ಥೆಯನ್ನು ಕುರಿತು ಅನುತಾಪವಿಲ್ಲದವನಲ್ಲ; ಆತನು ಸರ್ವ ವಿಷಯಗಳಲ್ಲಿ ನಮ್ಮ ಹಾಗೆ ಶೋಧನೆಗೆ ಗುರಿಯಾದನು, ಪಾಪ ಮತ್ರ ಮಾಡಲಿಲ್ಲ. ಆದದರಿಂದ ನಾವು ಕರುಣೆಯನ್ನು ಹೊಂದುವಂತೆಯೂ ಆತನ ದಯೆಯಿಂದ ಸಮಯೋಚಿತವಾದ ಸಹಾಯವು ನಮಗೆ ದೊರೆಯುವಂತೆಯೂ ಧೈರ್ಯದಿಂದ ಕೃಪಾಸನದ ಮುಂದೆ ಬರೋಣ (4:15, 16).

## ಯೇಸು ಮನುಷ್ಯನಾದ ವಿಚಾರ ಪ್ರಮುಖ ಏಕೆ?

ಆತನು ಮನುಷ್ಯನಾಗಿದ್ದರಿಂದ, ನಾವು ಅನುಭವಿಸಿದ ಬಾಧೆ ಹಾಗೂ ಶೋಧನೆಗಳನ್ನು ತಾನು ಅನುಭವಿಸಿರುವದರಿಂದ, ಬಲಹೀನರಾದವರಿಗೆ ಅನುಕಂಪವನ್ನು ತೋರುತ್ತಾನೆ. ಆದ್ದರಿಂದ, "ನಮ್ಮ ಮಹಾಯಾಜಕನು, ನಮಗಾಗಿ ದೇವರ ಮುಂದೆ ಮಧ್ಯವರ್ತಿಯಾಗಿರುವದರಿಂದ, ಆತನ ಕೃಪೆಯು ಸನ್ನಿಧಿಗೆ ಭರವಸೆಯ ಪ್ರವೇಶ" ಮಾಡಬಹುದಾಗಿದೆ.

ಯೇಸು, ದೈವತ್ವವನ್ನೂ ಹೊಂದಿ, ದೇವರ ಮಗನಾಗಿರುವದರಿಂದ, ಆತನ ಮಾತುಗಳಿಗೆ ನಾವುಗಳು ಕಿವಿಗೊಡಬೇಕು. ಇಲ್ಲದೆ ಹೋದರೆ ಶಿಕ್ಷಾರ್ಹರಾಗುತ್ತೇವೆ. ಆತನು ನಮ್ಮ ಹಾಗೆ ಮನುಷ್ಯನಾದ್ದರಿಂದ ಮತ್ತು ಅನುಕಂಪದಿಂದ ದೇವರ ಮುಂದೆ ನಮಗಾಗಿ ವಿಜ್ಞಾಪನೆ ಮಾಡುತ್ತಿರುವದರಿಂದ, ನಾವುಗಳು ದೇವರ ಮುಂದೆ ಧೈರ್ಯವಾಗಿ ಬರಬಹುದಾಗಿದೆ.

ಎಚ್ಚರ ಹಾಗೂ ಭರವಸೆ: ಕ್ರಿಸ್ತನ ದೈವತ್ವ ಹಾಗೂ ಮನುಷ್ಯತ್ವವನ್ನು ನಮ್ಮಲ್ಲಿ ಪ್ರಚರಪಡಿಸಬೇಕು. ದೈವತ್ವ ಹೊಂದಿರುವ ಯೇಸುವಿನ ಮಾತುಗಳಿಗೆ ಎಚ್ಚರದಿಂದ ಗಮನ

ನೀಡಬೇಕು, ಆದಾಗ್ಯೂ ನಮ್ಮನ್ನು ಕನಿಕರಿಸಿದ ಯಾಜಕನ ಮೂಲಕ ನಾವುಗಳು ದೇವ ಸಾನಿಧ್ಯಕ್ಕೆ ಧೈರ್ಯದಿಂದ ಬರಬಹುದು!

## ಮುಕ್ತಾಯ

ಇಬ್ರಿಯ 2ರಲ್ಲಿ ಸತ್ಯವೇದದ ಮಹಾ ಸತ್ಯವನ್ನು ಪ್ರಕಟಿಸಲಾಗಿದೆ: ಕ್ರಿಸ್ತನು ನಮ್ಮೆಲ್ಲರಿಗಾಗಿ ಮರಣವನ್ನು ಹೊಂದಿರುವನು! "ಆತನು ದೇವರ ಕೃಪೆಯಿಂದಲೇ ಎಲ್ಲಾರಿಗೋಸ್ಕರ ಮರಣವನ್ನು ಅನುಭವಿಸಿದನು" (2:9). "ತನ್ನ ಮರಣದಿಂದಲೇ ಮರಣಾಧಿಕಾರಿಯನ್ನು ಅಂದರೆ ಸೈತಾನನನ್ನು ಅಡಗಿಸಿದನು." "ದಾಸತ್ವದಿಂದ ಬಿಡಿಸುವದಕ್ಕೂ ಅವರಂತೆ ರಕ್ತಮಾಂಸದಾರಿಯಾದನು" (2:14, 15). ಆತನು ಎಲ್ಲರಿಗಾಗಿ ಸತ್ತನು ಅಂದರೆ: "ನಿನ್ನನ್ನು ಪಾಪದ ದಾಸತ್ವದಿಂದ ಬಿಡಿಸಲು, ನಿನಗಾಗಿ ಸತ್ತನು!"

ಅದರ ಬಗ್ಗೆ ನಿನ್ನ ಚಿಂತನೆ ಏನು? "ಸರ್ವಾಧಿಕಾರ"ವನ್ನು ನೀಡಿರುವವನಿಗೆ ಅಧೀನನಾಗುವೆಯೇ? (ಮತ್ತಾಯ 28:18)? ಯೇಸುವನ್ನು ನಂಬಿ, ಮಾನಸಾಂತರಪಟ್ಟು ನಂಬಿಕೆಯನ್ನು ಅರಿಕೆ ಮಾಡಿ, ಕ್ರಿಸ್ತನಲ್ಲಿ ದೀಕ್ಷಾಸ್ನಾನವನ್ನು ಮಾಡಿಸಿಕೊಳ್ಳುವಿಯಾ? ಅಥವಾ ಪರಲೋಕದಿಂದ ಮಾತಾಡಿದವನಿಗೆ ವಿರೋಧವಾಗುವಿಯಾ? ಇಂತಹ ಶ್ರೇಷ್ಟ ರಕ್ಷಣೆಯನ್ನು ಅಲಕ್ಷ್ಯ ಮಾಡಿದರೆ, ಹೇಗೆ ತಪ್ಪಿಸಿಕೊಳ್ಳುವಿ? ನೀನು ತಪ್ಪಿಸಿಕೊಳ್ಳವಿ? ನೀನು ತಪ್ಪಿಸಿಕೊಳ್ಳಬಾರದು ಎಂಬದೇ ಉತ್ತರವಾಗಿದೆ! ನಿನ್ನ ಪಾಪಕ್ಕಾಗಿ ಶಿಕ್ಷೆ ಇದೆ, ನಿನಗಾಗಿ ಮರಣ ಹೊಂದಿದವನ ಬಳಿಗೆ ಬಾ.

---

ಟಿಪ್ಪಣಿಗಳು

[1]ದೈವೀಕ ಕ್ರಿಸ್ತ, ಮಾನವನಾದ ಕ್ರಿಸ್ತ ಎಂದು ವಿಭಾಗಿಸಲಾಗಿದೆ. [2]ಯೇಸು ಪಾಪಮಾಡಲಿಲ್ಲ. ಇಬ್ರಿಯ 4:14-16.